ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ ' ಮೊದಲನೆಯ ಖಂಡ ಹೆಸರು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಅಧ್ಯಕ್ಷರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಿರುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

(ಇ) ಕರ್ನಾಟಕ ಭೂಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕ 2005

ಪರ್ಯಾಲೋಚನಾ ಪ್ರಸ್ತಾವ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಅಧ್ಯಕ್ಷರೆ, "2005ರ ಕರ್ನಾಟಕ ಭೂಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ಪಿ. ಪ್ರಕಾಶ್ : ಇದೂ ಸಹ ಬಹಳ ಸರಳ ಸಣ್ಣ ತಿದ್ದುಪಡಿ. 77ನೇ ಪ್ರಕರಣದಡಿ ಹಿಂದೆ ಯಾವುದಾದರೂ ಅಪೀಲಿನಲ್ಲಿ ಜಿಲ್ಲಾಧಿಕಾರಿ ಮಾಡಿದಂತಹ ಆಜ್ಞೆಯ ವಿರುದ್ಧ ವಿಭಾಗಾಧಿಕಾರಿಗಳಿಗೆ ಅಪೀಲ್ ಮಾಡುವ ಅಧಿಕಾರ ಇತ್ತು. ಆದರೆ ಹಾರನಹಳ್ಳಿ ರಾಮಸ್ವಾಮಿ ಆಡಳಿತ ಸುಧಾರಣಾ ಆಯೋಗದ ವರದಿ ಅಂಗೀಕೃತವಾದ ಮೇಲೆ ವಿಭಾಗಾಧಿಕಾರಿಗಳ ಹುದ್ದೆ ಇಲ್ಲದೇ

ಇರುವುದರಿಂದ ಜಿಲ್ಲಾಧಿಕಾರಿಗಳು ಮಾಡಿದಂತಹ ನಿರ್ಣಯದ ವಿರುದ್ಧ ಮೇಲ್ಮನವಿ ಮಾಡಿಕೊಳ್ಳಲು ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್‌ಗೆ ಅಧಿಕಾರ ಕೊಡುವುದು ಎಂದು ತಂದಿರುವ ಸರಳವಾದ ವಿಧೇಯಕ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಅಧ್ಯಕ್ಷರೆ, ಬಿಲ್ ಸರಳ ಆದರೆ ಡ್ರಾಫ್ಟಿಂಗ್ ಚೆನ್ನಾಗಿಲ್ಲ. ತಾವು ಏನು ಹೇಳಿದಿರಿ ಅದು ಯಾವುದೂ ಡ್ರಾಫ್ಟಿಂಗ್‌ನಲ್ಲಿ ರಿಫ್ಲೆಕ್ಟಾಗಿಲ್ಲ. ಸ್ವಲ್ಪ ಅದನ್ನು ಕ್ಲಿಯರ್ ಮಾಡಬೇಕಾಗಿತ್ತು. ಅಷ್ಟೇ ಅಬ್ಜೆಕ್ಟ್ ಆದರೆ ನಮ್ಮದೇನೂ ತಕರಾರಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಡ್ರಾಫ್ಟಿಂಗಿನ ಯಾವ ಪದಪುಂಜದ ಬಗ್ಗೆ ತಾವು ಆಕ್ಷೇಪಣೆ ಮಾಡುತ್ತಿದ್ದೀರೋ ನನಗೆ ಗೊತ್ತಿಲ್ಲ. 77ನೇ ಪ್ರಕರಣದ 1ನೇ ಉಪಪ್ರಕರಣದಡಿಯಲ್ಲಿ ಎಂಬ ಪದಗಳು ಆವರಣ ಚಿಹ್ನೆಗಳು ಮತ್ತು ಅಂಕಿಗಳ ತರುವಾಯ 77ನೇ 1ನೇ ಉಪಪ್ರಕರಣದಡಿಯಲ್ಲಿ ಎಂಬ ಪದಗಳು ಆವರಣ ಚಿಹ್ನೆಗಳು ಸೇರಿಸತಕ್ಕದ್ದು. ಇದರ ಉದ್ದೇಶ ಇರುವುದು ಇಷ್ಟೇ: ಜಿಲ್ಲಾಧಿಕಾರಿಗಳು ಆಜ್ಞೆಯ ವಿರುದ್ಧ ನಾವೇನಾದರೂ ಕಂದಾಯದ ಅಪೀಲ್ ಹಾಕ ಬೇಕಾಗಿದ್ದರೆ ಅದು ವಿಭಾಗಾಧಿಕಾರಿಗಳಿಗೆ ಹೋಗುತ್ತಿತ್ತು. ವಿಭಾಗಾಧಿಕಾರಿಗಳ ಹುದ್ದೆಯೇ, ಈಗ ರದ್ದಾಗಿರುವುದರಿಂದ.....

ಶ್ರೀ ಜೆ.ಸಿ. ಮಾಧುಸ್ವಾಮಿ : ಆದರೆ ನೀವು ಅಪೀಲುಗಳನ್ನು 118 ಪ್ರಾವಿಷನ್ ಕೆಳಗೆ ನಿಮಗೆ ಕೊಟ್ಟಿದ್ದರಲ್ಲಾ the provision of the existing Act, ಅದರಲ್ಲಿರುವುದಕ್ಕೂ ನೀವಿಲ್ಲಿ ತಿದ್ದುಪಡಿ ತೋರಿಸುವುದಕ್ಕೂ ಕಂಟಿನ್ಯೂಟಿ ಇಲ್ಲ.ನೋಡಿ ಅದರಲ್ಲಿ ನೀವು ಏನೂ ಹೇಳಲಿಲ್ಲ. ಆವರಣಗಳು, ಚಿಹ್ನೆ ಮತ್ತು ಅಂಕಿಗಳ ತರುವಾಯ ಅಂತ ಇಲ್ಲಿ ಇರಬೇಕಾಗಿತ್ತಲ್ಲಾ.

ಶ್ರೀ ಎಂ.ಪಿ. ಪ್ರಕಾಶ್ : ನೋಡಿ, ಜಿಲ್ಲಾಧಿಕಾರಿ ಅಥವಾ 77ನೇ ಪ್ರಕರಣದ 1ನೇ ಉಪಪ್ರಕರಣದಡಿಯಲ್ಲಿ ಪ್ರಾಧಿಕೃತನಾದ ಒಬ್ಬ ಅಧಿಕಾರಿ ಅಸಿಸ್ಟೆಂಟ್ ಕಮೀಶನರ್ ಅಥವಾ 83 ರ ಪ್ರಕರಣದಡಿಯಲ್ಲಿ ನಿರ್ದಿಷ್ಟ ಪಡಿಸಿದ ಪ್ರಾಧಿಕಾರಿಯು ಮಾಡಿದ ಪ್ರತಿಯೊಂದು ಆದೇಶದ ಮೇಲೆ ಕೆ.ಎ.ಟಿ.ಗೆ ಅಪೀಲು ಇರುವಂತಹದು ಮತ್ತು ಅಂತಹ ಅಪೀಲು ಅಂಕಿತಗೊಳ್ಳತಕ್ಕದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಉದ್ದೇಶದಲ್ಲಿ 77ನೇ ಪ್ರಕರಣ 1ಎ ಉಪಪ್ರಕರಣದಡಿಯಲ್ಲಿ ಎಂಬ ಪದಗಳು ಆವರಣ ಚಿಹ್ನೆ ಮತ್ತು ಅಂಕಿಗಳ ತರುವಾಯ ಅದು ಇಲ್ಲಿ ರಿಫ್ಲೆಕ್ಟಾಗಿದ್ದು ಅದಕ್ಕೆ ಫರ್ದರ್ ಅಮೆಂಡ್‌ಮೆಂಟ್ ಆದರೆ ಏನಾಗುತ್ತದೆ ಅಂತ ಹೇಳಬೇಕಾಗಿತ್ತು. We have no objection in

passing the Bill.But Bill prepare ಮಾಡುವಾಗ existing provision ಸರಿಯಾಗಿ ಬರಬೇಕು.

Sri M.P. Prakash : Existing provision ಅನ್ನುವುದನ್ನು ತೋರಿಸಿದ್ದೇವೆ. ಇಂಗ್ಲಿಷಿನಲ್ಲಿ ನಂಬರ್ 2 ಇದೆ ತೆಗೆಯಿರಿ ' In section 118 of the Karnataka Land Reforms Act, 1961(Karnataka Act 10 of 1962) in sub-section (2), after the words, figures and brackets "sub- section (1) of section 77" the words, figures brackets and letters "or sub- section (1) of section 77"shall be inserted ಕನ್ನಡದ ಕಾನೂನಿನ ಪದಭಾಷೆ ಇನ್ನೂ ಹೊಸದಾಗಿ ಆಗಿರುವುದರಿಂದ ಅದು ಸ್ವಲ್ಪ ಮುಜುಗರವನ್ನು ಮಾಡಬಹುದು ಇಂಗ್ಲಿಷ್‌ನಲ್ಲಿ ಬಹಳ ಸ್ಪಷ್ಟವಾಗಿದೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಅಧ್ಯಕ್ಷರೆ, ರೆವಿನ್ಯೂ ಅಪಲೇಟ್ ಟ್ರಿಬ್ಯೂನಲ್ ಇದೆಯಲ್ಲಾ, ಇದನ್ನು ರಚಿಸುವುದು ಸರ್ಕಾರವೇ ತಾನೇ? ತಾವು ದಯವಿಟ್ಟು ಅದರಿಂದ ಇತ್ತೀಚೆಗೆ ಬರುವ ತೀರ್ಪುಗಳನ್ನು ಪರಿಶೀಲನೆಮಾಡಿ. ಏಕೆಂದರೆ ನಮಗೆ ಬಹಳ ತೊಂದರೆಗಳಾಗುತ್ತಿವೆ. ಕಾಡು ಕಾಡೇ, ನೂರು ಎಕರೆ ಜಮೀನು ಅದಕ್ಕೇನೂ ತಂದೆ ಇಲ್ಲ ತಾಯಿ ಇಲ್ಲ ಯಾರು ಏನು ಬೇಕಾದರೂ ಮಾಡಿಕೊಂಡು ಹೋಗಬಹುದು ಎನ್ನುವ ರೀತಿ ತೀರ್ಪುಗಳು ಬರುತ್ತಾ ಇವೆ,. ಮಾನ್ಯ ಸಚಿವರೇ, ಆ ಟ್ರಿಬ್ಯೂನಲ್‌ನಲ್ಲಿ ಯಾರಿದ್ದಾರೆ ಯಾವ ಕಾರಣಕ್ಕಾಗಿ ಅವರನ್ನು ಸದಸ್ಯರನ್ನಾಗಿ ಮಾಡುತ್ತಿರುವಿರಿ? ಅವರಿಗೇನಾದರೂ ಕಾನೂನು ಇತಿಮಿತಿ ಗೊತ್ತಿದೆಯಾ? ಇದನ್ನು ದಯವಿಟ್ಟು ನೋಡಿ. ನನ್ನ ಕ್ಷೇತ್ರದಲ್ಲಿ ಅಧ್ಯಕ್ಷರೆ, ಒಂದೂವರೆ ಸಾವಿರ ಎಕರೆ ಅರಣ್ಯಭೂಮಿಯನ್ನು ಒಂದು ಮಠಕ್ಕೆ ಕೊಟ್ಟುಬಿಟ್ಟಿದ್ದಾರೆ. ನೂರು ಕೋಟಿ ರೂ. ಬೆಲೆ ಬಾಳುವಂತಹ ನಾಟಾವನ್ನು ಅವನು ಇವತ್ತು ಕಡಿಯಲಿಕ್ಕೆ ಹೊರಟಿದ್ದಾನೆ. ಇಡೀ ನಮ್ಮ ತೀರ್ಥಹಳ್ಳಿ ತಾಲ್ಲೂಕಿನ ಮೇಲೆ ಪ್ರಾಕೃತಿಕವಾಗಿ ಇದರ ಪರಿಣಾಮ ಆಗುತ್ತದೆ. ಇದಕ್ಕೆ ಕಾನೂನಿನ ಹಿನ್ನೆಲೆ ಮುನ್ನೆಲೆ ಇಲ್ಲ, ವಾಸ್ತವವಾಗಿ ಆ ಟ್ರಿಬ್ಯೂನಲ್ ಆಕ್ಟ್ ಪ್ರಕಾರ ಏನಾಗಿದೆ ಅನ್ನುವುದು ಇಲ್ಲ, ಇವತ್ತು ಈ ಪರಿಸ್ಥಿತಿಯಿಂದ ಜಿಲ್ಲಾಧಿಕಾರಿಗಳು ಇವರಲ್ಲಾ ಹಣೆ ಹಣೆ ಚಚ್ಚಿಕೊಳ್ಳುತ್ತಿದ್ದಾರೆ. ಏನ್ ಸಾರ್ ಮಾಡುವುದು, ಅಲ್ಲಿ ರವಿನ್ಯೂ ಅಪಲೆಟ್ ಟ್ರಿಬ್ಯೂನಲ್‌ನಿಂದ ಇಂತಹ ತೀರ್ಪುಗಳು ಬರುತ್ತಿವೆ ಅಂತ. ಅಲ್ಲಿ ಯಾರನ್ನು ಕೂರಿಸಿದ್ದೀರಿ? ದಯಮಾಡಿ ಸ್ವಲ್ಪ ಚೇಂಜ್ ಮಾಡಿ, ಯಾರಾದರೂ ಗೌರವಾನ್ವಿತ ವ್ಯಕ್ತಿಗಳನ್ನು ಅಲ್ಲಿ ಕೂರಿಸುವಂತಹ

ವ್ಯವಸ್ಥಿತವಾದಂಥ ಪ್ರಯತ್ನ ಮಾಡದೇ ಹೋದರೆ ಟ್ರಿಬ್ಯೂನಲ್ ಅನ್ನುವುದು ನ್ಯಾಯಾಲಯ ಅಂತ ಕರೆಸಿಕೊಳ್ಳ ಬೇಕಾದರೆ ಅದಕ್ಕೊಂದು ಗೌರವ ಬರಬೇಕು. ಸ್ಯಾಂಕ್ಟಿಟಿ ಬರಬೇಕು. ಈ ಸ್ಥಿತಿ ಬರದೇ ಹೋದರೆ ಈ ರಾಜ್ಯದ ಜನಕ್ಕೆ ಖಂಡಿತಾ ನ್ಯಾಯ ದೊರಕುವುದಿಲ್ಲ. ಮತ್ತೆ ನಮ್ಮ ಒಂದೂ ಜಮೀನುಗಳು ಉಳಿಯುವುದಿಲ್ಲ. ಯಾರು ಹಣವಂತರು ಅವರ ಪರವಾಗಿ ತೀರ್ಪು ಹೋಗುತ್ತದೆ ಎಂಬ ಭಾವನೆ ನಿರ್ಮಾಣವಾದರೆ ಬಹಳ ಕಷ್ಟವಾಗುತ್ತದೆ. ತಾವು ಮಂತ್ರಿಯಾಗಿದ್ದೀರಿ, ತಾವು ಇದರ ಬಗ್ಗೆ ವೈಯಕ್ತಿಕವಾಗಿ ಗಮನಹರಿಸದೆ ಇದ್ದರೆ ನಮ್ಮೆಲ್ಲರ ಗೌರವ ಹರಾಜಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಶಾಸಕರು ಪ್ರಸ್ತಾಪ ಮಾಡಿದ ಪ್ರಕರಣ ನನಗೆ ಗೊತ್ತಿದೆ. ಹಿಂದಿನ ಸದನದಲ್ಲಿ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ದುರ್ದೈವವೆಂದರೆ ಯಾವ ಯಾವ ನಮ್ಮ ಸಂವಿಧಾನಾತ್ಮಕವಾದಂಥ ನ್ಯಾಯಾಲಯಗಳು, ನ್ಯಾಯಾಧಿಕರಣಗಳು ಇರುತ್ತವೆ, ನಮ್ಮ ನಿರೀಕ್ಷೆಯ ಮಟ್ಟದಲ್ಲಿ ಅವು ತಮ್ಮ ಗುಣಾತ್ಮಕವಾಗಿ ಕೆಲಸ ಮಾಡುವುದಿಲ್ಲವೆನ್ನುವುದು ಎಲ್ಲರಿಗೂ ಗೊತ್ತಿದೆ. ಇತ್ತೀಚಿನ ದಿನಮಾನಗಳಲ್ಲಿ ಕೆಲವು ನ್ಯಾಯಾಲಯಗಳಿಂದ ಬಂದಿರತಕ್ಕ ತೀರ್ಮಾನಗಳು ಮತ್ತು ಮುಖ್ಯವಾದ ವಿಷಯವನ್ನು ಬಿಟ್ಟು ಮತ್ತೆ ಬೇರೆ ಅಮುಖ್ಯವಾದ ವಿಷಯದ ಮೂಲಕವಾಗಿ ಮರುಪರಿಶೀಲನೆ ಮಾಡಿ ಎಂದು ವಾಪಸ್ ಕಳುಹಿಸತಕ್ಕಂಥದ್ದು ಇಂಥದ್ದೆಲ್ಲಾ ನಡೆಯುತ್ತಿದೆ. ಆದರೆ ಇದು ಸಮಾಜದಲ್ಲಿರತಕ್ಕ ಗುಣಾತ್ಮಕ ವಿಷಯದಲ್ಲಿ ತಾವು ಕೂಡ ಬೇಕಾದ ತೀರ್ಮಾನಗಳಿಗೆ ಈ ತರಹದ ಲೋಪಗಳು ಆಗುತ್ತಿವೆ. ತಾವು ಹೇಳಿದಂಥ ಮಾತು ಒಪ್ಪಿಕೊಳ್ಳುತ್ತೇನೆ. ಆದರೆ ನೇಮಕಾತಿ ಮಾಡಿದವರೆಲ್ಲರೂ ಹೀಗಿದ್ದಾರೆ ಎಂತಲ್ಲ. ಅಲ್ಲಿ ಒಬ್ಬ ಮುಖ್ಯ ಉಚ್ಚ ನ್ಯಾಯಾಲಯದ ಸಮಾನವಾಗಿರತಕ್ಕ ಅಧಿಕಾರ ಪಡೆದಿರತಕ್ಕಂಥವರು ನಿವೃತ್ತರಾಗಿರತಕ್ಕಂಥವರೂ ಕೂಡ ಇರತ್ತಾರೆ. ತಾವೇನು ಹೇಳಿದ್ದೀರಿ, ಇದು ನಮ್ಮೆಲ್ಲರ ಅನೇಕರ ಭಾವನೆಗಳು ಕೆಲವು ಕಡೆಗೆ ಆಗಿರಬಹುದು. ಆದರೆ ಇದು ಬಿಟ್ಟು ಬೇರೆ ಅನಿವಾರ್ಯ ಕಾರಣಗಳಿಲ್ಲ. ಈ ವ್ಯವಸ್ಥೆಯಲ್ಲೇ ನಾವು ಹೋರಾಟವನ್ನು ಮಾಡಬೇಕಾಗುತ್ತದೆ. ಈ ನ್ಯಾಯಾಧಿಕರಣ ಪರ್‌ಸೀ ತಪ್ಪೇನಾದರೂ ಮಾಡಿರತಕ್ಕಂಥಾದ್ದು ಇದ್ದಾಗ ಮತ್ತೆ ನಾವು ಹೈಕೋರ್ಟ್‌ಗೆ ಹೋಗಬೇಕಾದಂಥ ಅನಿವಾರ್ಯತೆ ಬರುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತಾವು ಸರ್ಕಾರದವರು ಇದನ್ನು ನೇಮಕಾತಿ ಮಾಡುವ ಸಂದರ್ಭದಲ್ಲಿ ಯಾರನ್ನಾದರೂ ಯೋಗ್ಯರನ್ನು ಮಾಡಿ ಸಾರ್. ಅವರು ನ್ಯಾಯ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಈಗ ಯೋಗ್ಯ ಅಯೋಗ್ಯ ಎನ್ನುವಂಥದ್ದು ಅನೇಕ ಸಂದರ್ಭದಲ್ಲಿ ಸಾಪೇಕ್ಷ, ಸಾಮಾಜಿಕವಾಗಿರತಕ್ಕಂಥ ಮೀಸಲಾತಿಯನ್ನು ಕೊಡಬೇಕಾಗುತ್ತದೆ. ನನ್ನ ದೃಷ್ಟಿಯಲ್ಲಿ ಬಹಳ ಯೋಗ್ಯರು ಎಂದು ಪರಿಗಣಿಸಿದವರು ನಂತರದ ದಿನಮಾನಗಳಲ್ಲಿ ಅಯೋಗ್ಯರಾಗಿ ಪರಿವರ್ತನೆಗೊಳ್ಳುತ್ತಾರೆ. ಇವೆಲ್ಲಾ ಸಾಪೇಕ್ಷವಾಗಿರುವುದರಿಂದ, ಇದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯೋಗ್ಯರು ಮತ್ತು ಅಯೋಗ್ಯರು ಯಾರ್ಯಾರು ಎಂದು ಒಂದು ಲಿಸ್ಟನ್ನಾದರೂ ಮಾಡಿದರೆ ಒಳ್ಳೆಯದು. ಯೋಗ್ಯರು ಯಾರು? ಯಾರು ಅಯೋಗ್ಯರು ಎಂದರೆ ಏನು? ಎರಡೂ ಇರಬೇಕಲ್ಲಾ.

ಶ್ರೀ ಎಂ.ಪಿ. ಪ್ರಕಾಶ್: ಅದಕ್ಕೆ ನಾನು ಸಾಪೇಕ್ಷ ಎಂದು ಹೇಳಿದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಿ.ಆರ್. ಬರೆಸುವುದು ಯಾರು ಯೋಗ್ಯರು ಅಯೋಗ್ಯರಲ್ಲ ಎಂದು ಹೇಳುವುದಕ್ಕೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಯಾರ್ಯಾರು ಯೋಗ್ಯತೆಯಲ್ಲಿ ಮಾತನಾಡುತ್ತಾರೋ ಅವರು ಯೋಗ್ಯರು. ಯಾರ್ಯಾರು ಅಯೋಗ್ಯತೆಯಲ್ಲಿ ಮಾತನಾಡುತ್ತಾರೋ ಅವರು ಅಯೋಗ್ಯರೆಂದು ಮಾಡೋಣ. ಅದು ಒಂದು ಕಡೆ. ಎರಡನೇಯದು ತಾವೇನು ಮೆಂಬರ್‌ಷಿಪ್‌ನ್ನು ಕೊಡುತ್ತೀರಿ, kindly provide legal experts. ಸ್ವಲ್ಪ ಅಟ್‌ಲೀಸ್ಟ್ ಲೀಗಲ್ ಪ್ರೊಸೀಜರ್ ಗೊತ್ತಾಗಲಿ. ನೀವು ನಾಮಿನೇಷನ್ ಮಾಡುವ ಟೈಮ್‌ನಲ್ಲಿ ಯಾರೋ ಒಬ್ಬರನ್ನು ಮಾಡಿ ಅವನು ಸುಮ್ಮನೆ ಭೋಗಸ್ ಬೇಕಾದಷ್ಟು ಮಾಡಿಬಿಡುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಒಬ್ಬ ನಿವೃತ್ತ ನ್ಯಾಯಾಧೀಶ ಇರುತ್ತಾರೆ. ಅದರ ಜೊತೆಗೆ ಇದಕ್ಕೆ ಸಂಬಂಧಪಟ್ಟಿರತಕ್ಕಂಥವರು ಕಾರ್ಯದರ್ಶಿಗಳಾಗಿ ಬಹು ವರ್ಷಗಳಕಾಲ ಉತ್ತಮವಾಗಿರತಕ್ಕ ಸೇವಾ ವಿಚಾರಗಳನ್ನು ಸರ್ವೀಸ್ ರೆಕಾರ್ಡ್ ಇಟ್ಟುಕೊಂಡಿರತಕ್ಕಂಥವರನ್ನು ನೋಡಿ ಮಾಡುತ್ತೇವೆ. ಆದರೆ ಕೆಲವು ಸಲ ಅವರ ದೃಷ್ಟಿಕೋನದಲ್ಲಿ ಕಾನೂನನ್ನು ಅರ್ಥಮಾಡಿಕೊಳ್ಳುವುದಕ್ಕಾಗುವುದಿಲ್ಲವೋ ಅಥವಾ ಮಾನ್ಯ ಶಾಸಕರು ಹೇಳಿದಂತೆ ಇನ್ನೂ ಅನ್ಯ ಕಾರಣಗಳಿಗೆ ಪ್ರಭಾವಗಳಿಗೆ ಒಳಗಾಗಿ ಒಂದೊಂದು ಸಲ

ತೀರ್ಮಾನಗಳೂ ಕೂಡ ಆಗುತ್ತವೆ. ಇದು ಅನಿವಾರ್ಯ. ಇದು ವ್ಯವಸ್ಥೆಯ ಲೋಪ.

ಶ್ರೀ ಎಸ್. ರಾಜೇಂದ್ರನ್ : ವಿಮ್ಸ್ ಅಂಡ್ ಫ್ಯಾನ್ಸಿಯಲ್ಲಿ ಮಾಡುವುದಕ್ಕಿಂತ ಸ್ವಲ್ಪ ನಾಲೇಜ್ ಇರುವವರನ್ನು ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. that is all.

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಅನೇಕ ಸಂದರ್ಭದಲ್ಲಿ ರೆವಿನ್ಯೂಗೆ ಸಂಬಂಧಪಟ್ಟ ಅಪೀಲು ಮಾಡುವಂಥ ಸಂದರ್ಭದಲ್ಲಿ ಟ್ರಿಬ್ಯೂನಲ್‌ನಲ್ಲಿ ಅಲಾಟ್ ಮಾಡಿರತಕ್ಕ ಜಾಗ ಎಷ್ಟಿದೆ, ಅದರ ನಂತರ ಆಕ್ಚುಯಲಿ ಸರ್ವೆ ಇದರಲ್ಲಿ ಗಡಿ ಯಾವುದು ಇದೆ, ಆ ಗಡಿ ಮತ್ತು ಅದಕ್ಕೆ ಸಂಬಂಧಪಟ್ಟದ್ದರಲ್ಲಿ ಸಾಕಷ್ಟು ಡಿಸ್‌ಪ್ಯೂಟ್ ಬರುತ್ತಿದೆ. ಇಂಥ ಸನ್ನಿವೇಶಗಳಲ್ಲಿ ತಮ್ಮಲ್ಲಿ ನಾನು ವಿಶೇಷವಾಗಿ ವಿನಂತಿ ಮಾಡುತ್ತಿದ್ದೇನೆ, ಕಂದಾಯ ಇಲಾಖೆಯಲ್ಲಿ ಬೇರೆ ಬೇರೆ ಕಡೆಗಳಲ್ಲಿ ತಾವು ಸರ್ವೆ ಇದರಲ್ಲಿ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ತಾವೇನು ಅಪಾಯಿಂಟ್ ಮಾಡಿದ್ದೀರಿ,ಅವರಿಗೆ ತರಬೇತಿ ಇಲ್ಲದೆ ಅವರು ಮಾಡಿರುವಂಥ ಒಂದು ಅಳತೆ ನಂತರ ಮೂಲ ಇರತಕ್ಕ ದಾಖಲೆಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಬರುತ್ತಿರುವಂಥದ್ದು ಕಂಡುಬಂದಿದ್ದರಿಂದ ಈ ಹಿನ್ನೆಲೆಯಲ್ಲಿ ಅವರಿಗೆ ಕನಿಷ್ಟ ಪ್ರಾಪರ್ ಟ್ರೈನಿಂಗ್‌ನ್ನು ಕೊಟ್ಟಾದರೂ ಅವರನ್ನು ಕೆಲಸಕ್ಕೆ ವಿನಿಯೋಗಿಸಿದಲ್ಲಿ ಸ್ವಲ್ಪ ಸಹಾಯವಾಗಬಹುದು. ಇಲ್ಲದಿದ್ದರೆ ಸಾಕಷ್ಟು ದಾಖಲೆ ಪತ್ರಗಳಲ್ಲಿ ತಪ್ಪು ಬರುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಕೂಡ ಈ ತರಹ ಅಪೀಲುಗಳು ಬರುವ ಸಾಧ್ಯತೆಗಳೂ ಕೂಡ ಇವೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಪ್ರಸ್ತಾಪ ಮಾಡಿದಂತೆ ಈಗೇನು ಪರಭಾರೆ ಸರ್ವೇಯರ್‌ಗಳನ್ನು ನೇಮಕಾತಿ ಮಾಡಿದ್ದೇವೆ. ಅವರಿಗೆ ಮೂರು ತಿಂಗಳವರೆಗಿನ ತರಬೇತಿಯನ್ನು ಈಗಾಗಲೇ ಕೊಡಲಾಗಿದೆ. ಮೂರು ತಿಂಗಳ ತರಬೇತಿಯ ಜೊತೆಗೆ ಸರ್ಕಾರ ಜಮೀನನ್ನು ಅಳತೆ ಮಾಡತಕ್ಕ ಅಧಿಕಾರ ಅವರಿಗೆ ಇಲ್ಲ. ಉಭಯ ಪಕ್ಷಗಳ ನಡುವೆ ಬಂದಿರತಕ್ಕ ಭಿನ್ನಾಭಿಪ್ರಾಯಗಳು ಇದ್ದರೆ ಆ ಭಿನ್ನಾಭಿಪ್ರಾಯಗಳ ಬಗ್ಗೆ ಸರ್ಕಾರದಿಂದ ನೇಮಕಾತಿಯಾಗಿರತಕ್ಕಂಥ ಸರ್ವೆಯರ್‌ನ ಅಧೀನದಲ್ಲಿ ಅವರು ಕೆಲಸವನ್ನು ಮಾಡಬೇಕು. ಆ ಒಂದು ಕೆಲಸ ಮಾಡಿದ್ದಕ್ಕೆ ಕೇವಲಮೂರು ನೂರು ರೂಪಾಯಿಗಳ ಸಂಭಾವನೆಯನ್ನು ಯಾರು ಅರ್ಜಿ ಕೊಟ್ಟಿರುತ್ತಾರೆ, ಅವರ ಮೂಲಕ ಅವರಿಗೆ ಕೊಡಿಸುತ್ತೇವೆ. ಆದರೆ ಅದನ್ನೂ ದಾಖಲೀಕರಿಸಿ ಅಥೆಂಟಿಕ್

ಡಾಕ್ಯುಮೆಂಟ್ ಎಂದು ತೋರಿಸಲಿಕ್ಕೆ ಬೇಕಾಗಿರತಕ್ಕಂಥವರು ಮತ್ತೆ ಸರ್ಕಾರ ಸರ್ವೇಯರ್‌ರವರೇ ಅದನ್ನು ಮಾಡಬೇಕಾಗುತ್ತದೆ, ಆ ಟಿಪ್ಪಣಿ ಇರತಕ್ಕಂಥದು ದ್ದಿದೆ. ಕೆಲವು ಸಲ ತಪ್ಪಾಗಿರತಕ್ಕಂಥದ್ದು ಇರಬಹುದು. ಟಿಪ್ಪಣಿ ಸಮೇತವಾಗಿರತಕ್ಕಂಥದ್ದು ನೋಡಿಯೇ ಮೂಲ ಸರ್ವೆಯನ್ನು ಅವರು ಮಾಡಬೇಕಾಗುತ್ತದೆ.

ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) : ಮಾನ್ಯ ಅಧ್ಯಕ್ಷರೆ, ತಾವು ಖಾಸಗಿ ಸರ್ವೆಯರ್‌ಗಳನ್ನು ನೇಮಕ ಮಾಡಿದ್ದೀರಿ. ಆದರೆ ಅವರು ಯಾರ ಅಧೀನದಲ್ಲಿರುತ್ತಾರೆ? ಅವರ ಕಛೇರಿ ಎಲ್ಲಿ ಇದೆ? ಹಳ್ಳಿಯಲ್ಲಿ ಎಲ್ಲಿ ಅವರನ್ನು ಹುಡುಕಬೇಕು? ನಮಗೆ ಅದು ಗೊತ್ತಾಗಬೇಕು. ಒಂದು ಏನಾದರೂ ಸರ್ವೆಯಾಗಬೇಕೆಂದರೆ ಆರು ತಿಂಗಳು ಕಾಯಬೇಕು. ಒಬ್ಬ ಬಡವನೇನಾದರೂ ಮಾಡಬೇಕೆಂದರೆ ಎಲ್ಲಿ ಅಲೆಯಬೇಕು. ಇದು ಜನರಿಗೆ ಗೊತ್ತಿಲ್ಲ. ಸರ್ಕಾರ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶಾಸಕರು ಹೇಳಿದಂತೆ ಬಹಳ ಆರು ತಿಂಗಳು ಕಾಯಬೇಕು ಎನ್ನುವ ಕಾರಣಕ್ಕಾಗಿಯೇ ನೇರ ನೇಮಕಾತಿಯನ್ನು ಮಾಡುವುದಿಲ್ಲ ಎಂದು ಹೇಳಿ ಖಾಸಗಿಯಾಗಿರತಕ್ಕ ಸರ್ವೇಯರ್‌ಗಳನ್ನು ಮಾಡಿದ್ದೇವೆ. ಎರಡು ಸಾವಿರ ಜನ ಖಾಸಗಿ ಸರ್ವೆಯರ್‌ಗಳ ನೇಮಕಾತಿಯಾಗಿದೆ. ಇದು ಮೂರು ನಾಲ್ಕು ವರ್ಷಗಳ ಹಿಂದೆ ನೇಮಕಾತಿಯಾಗಿದೆ. ಅವರಿಗೆ ಮೂರು ತಿಂಗಳ ಒಂದು ಅವಧಿಯ ತರಬೇತಿಯನ್ನೂ ಕೂಡ ಕೊಡಲಾಗಿದೆ. ಆದರೆ ಹೈಕೋರ್ಟ್‌ನಲ್ಲಿ ಅ ವಿಚಾರದಲ್ಲಿ ತಡೆಯಾಜ್ಞೆ ಇತ್ತು, ಆ ತಡೆಯಾಜ್ಞೆಯನ್ನು ತೆರವು ಮಾಡಿದ ನಂತರ ಈಗ ಒಂದು ಎರಡು ತಿಂಗಳ ಹಿಂದೆ ಅವರಿಗೆ ಅಧಿಕಾರವನ್ನು ನಾವು ಕೊಟ್ಟಿದೇವೆ. ಪ್ರತಿಯೊಂದು ಸರ್ವೆ ಡಿಪಾರ್ಟ್‌ಮೆಂಟ್ ಏನಿದೆ, ನಮ್ಮ ಕಛೇರಿ, ಆ ಕಛೇರಿಯಲ್ಲಿ ಅವರು ಇರುತ್ತಾರೆ. ಉಭಯ ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳು ಬಂದಿರತಕ್ಕ ಸಂದರ್ಭದಲ್ಲಿ ಅವರು ಮುನ್ನೂರು ರೂಪಾಯಿಗಳ ಶುಲ್ಕವನ್ನೇನು ಕೊಟ್ಟಿರುತ್ತಾರೆ, ಆ ಶುಲ್ಕವನ್ನು ತೆಗೆದುಕೊಂಡು ಅವರು ಟಿಪ್ಪಣಿಗನುಗುಣವಾದಂಥ ರೀತಿಯಲ್ಲಿ ಸರ್ವೆಯನ್ನು ಮಾಡಬೇಕಾಗುತ್ತದೆ. ಆ ಸರ್ವೆ ಮಾಡುವಾಗ ನಮ್ಮ ಸರ್ಕಾರಿ ಸರ್ವೇಯರ್‌ನ ಅಧೀನದಲ್ಲಿ ಅವರು ಆ ಕೆಲಸವನ್ನು ಮಾಡಬೇಕಾಗುತ್ತದೆ. ನಿಮ್ಮ ಸಮಸ್ಯೆಯನ್ನು ಬಗೆಹರಿಸುವುದಕ್ಕೇ ಇದನ್ನು ಮಾಡಿರುವುದು.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ : "2005ರ ಕರ್ನಾಟಕ ಭೂಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ: ' ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, "2005ರ ಕರ್ನಾಟಕ ಭೂಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ: "2005ರ ಕರ್ನಾಟಕ ಭೂಸುಧಾರಣಾ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2005

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, 2005ರ ಬೆಂಗಳೂರು ಅಭಿವೃದ್ಧಿ